

# ಕನ್ನಡಿಗರ ಹೃದಯ ಗೆದ್ದ ಮಹಾನಾಯಕ

ಕಿರುತೆರೆ ಮಾಧ್ಯಮ ಈ ನೆಲದ ಬಹುಸಂಖ್ಯಾತರ ಬದುಕನ್ನು ನಿರ್ಲಕ್ಷಿಸಿದೆ ಎನ್ನುವುದು ಪ್ರಜ್ಞಾವಂತರ ಅನಿಸಿಕೆ. ಈ ಮಾತಿಗೆ ಅಪವಾದದಂತಿರುವ 'ಮಹಾನಾಯಕ' ಧಾರಾವಾಹಿ, ಬಾಬಾಸಾಹೇಬ್ ಅಂಬೇಡ್ಕರ್ ಅವರ ಬದುಕು–ಸಾಧನೆಯನ್ನು ಕಟ್ಟಿಕೊಡುವ ಮಹತ್ವಾಕಾಂಕ್ಷೆಯ ಪ್ರಯತ್ನ. ಹಿಂದಿಯ ಈ ಧಾರಾವಾಹಿಯ ಕನ್ನಡ ಆವೃತ್ತಿಗೆ ಸಹೃದಯರಿಂದ ಮೆಚ್ಚುಗೆಯ ಉತ್ಸಾಹದ ಪ್ರತಿಕ್ರಿಯೆ ವ್ಯಕ್ತವಾಗಿದೆ. 'ಮಹಾನಾಯಕ' ಕನ್ನಡದಲ್ಲಿ ಮೂಡಿಬಂದದ್ದು ಹೇಗೆ ಎನ್ನುವುದರ ಕಥನ ಕುತೂಹಲಕ್ಕೆ ಉತ್ತರ ಇಲ್ಲಿದೆ.

■ ರಾಘವೇಂದ್ರ ಕೆ. ತೊಗರ್ಸಿ

ಹೆಣ್ಣುಮಕ್ಕಳನ್ನು ಕೇಂದ್ರವಾಗಿಟ್ಟುಕೊಂಡ ಗೋಳಿನ ಕಥೆಗಳು, ನಾಗ ನಾಗಿಣಿಯರು ಹಾಗೂ ದೆವ್ವ ಪ್ರೇತಾತ್ಮಗಳ ಕಥನಗಳನ್ನೊಳಗೊಂಡ ಸಿದ್ಧಸೂತ್ರಗಳ ಧಾರಾವಾಹಿಗಳು ತುಂಬಿಕೊಂಡಿರುವ ಕಿರುತೆರೆಯಲ್ಲಿ ಹೊಸನೀರಿನಂತೆ ಕಾಣಿಸಿಕೊಂಡಿದೆ 'ಮಹಾನಾಯಕ'. ಎಲ್ಲ ವರ್ಗದ ಹಾಗೂ ಎಲ್ಲ ವಯೋಮಾನಗಳ ಪ್ರೇಕ್ಷಕರು ಸ್ವೀಕರಿಸಿರುವುದು 'ಮಹಾನಾಯಕ' ಧಾರಾವಾಹಿಯ ಅಗ್ಗಳಿಕೆ.

ಝೀ ವಾಹಿನಿಯಲ್ಲಿ ಪ್ರತಿ ಶನಿವಾರ ಹಾಗೂ ಭಾನುವಾರ ಸಂಜೆ 6ರಿಂದ ಒಂದು ತಾಸು ಪ್ರಕಟವಾಗುವ 'ಮಹಾನಾಯಕ' ಪ್ರಸ್ತುತ ಕನ್ನಡ ಕಿರುತೆರೆಯಲ್ಲಿ ಪ್ರಸಾರವಾಗುತ್ತಿರುವ ಜನಪ್ರಿಯ ಧಾರಾವಾಹಿಗಳಲ್ಲೊಂದು. ಡಬ್ಬಿಂಗ್ ಕೃತಿಯಾದರೂ, ಡಬ್ಬಿಂಗ್ ವಿರೋಧಿಗಳು ಕೂಡ ಕುತೂಹಲದಿಂದ ವೀಕ್ಷಿಸುತ್ತಿರುವ ಧಾರಾವಾಹಿಯಿದು. ಅಂದಹಾಗೆ, ಸಿದ್ಧಸೂತ್ರಕ್ಕೆ ಹೊರತಾದ ಈ ಧಾರಾವಾಹಿಯನ್ನು ಪ್ರಸಾರ ಮಾಡುವ ಐಡಿಯಾ ವಾಹಿನಿಗೆ ಬಂದುದು ಹೇಗೆ?

"ಮಾಲ್ಗುಡಿ ಡೇಸ್ ಮತ್ತು ಮಹಾನಾಯಕ ಧಾರಾವಾಹಿಗಳನ್ನು ಕನ್ನಡಕ್ಕೆ ತರಬೇಕು ಎನ್ನುವ ಕನಸು ಬಹುದಿನಗಳಿಂದ ನನ್ನನ್ನು ಕಾಡುತ್ತಲೇ ಇತ್ತು. ಅದಕ್ಕೆ ಕಾಲ ಕೂಡಿ ಬಂದಿದ್ದು ಕೊರೊನಾದ ಲಾಕ್‌ಡೌನ್ ಸಂದರ್ಭ. ಮಾಲ್ಗುಡಿ ಡೇಸ್‌ಗಿಂತಲೂ ಮೊದಲೇ ಅಂಬೇಡ್ಕರ್ ಕಥನ ಅನಾವರಣ ಆಗಬೇಕಿತ್ತು. ತಾಂತ್ರಿಕ ಅಡ್ಡಿ ಎದುರಾದುದರಿಂದ ತಡವಾಯಿತು. 'ಮಾಲ್ಗುಡಿ ಡೇಸ್' ಸಿದ್ಧರೂಪದಲ್ಲಿ ಇದ್ದುದರಿಂದ ಅದರ ಪ್ರಸಾರವನ್ನೇ ಮೊದಲು ಆರಂಭಿಸಿದೆವು. ತರುವಾಯ ಅಂಬೇಡ್ಕರ್ ಅವರ ಹೋರಾಟಗಾಥೆಯ ಪ್ರಸಾರ ಆರಂಭಿಸಿದೆವು." ಹೀಗೆ 'ಮಹಾನಾಯಕ' ಆರಂಭಗೊಂಡ ಬಗೆಯನ್ನು ಝೀ ಕನ್ನಡ ಟೀವಿಯ ಮುಖ್ಯಸ್ಥ ರಾಘವೇಂದ್ರ ಹುಣಸೂರು 'ಸುಧಾ' ಜೊತೆ ಹಂಚಿಕೊಂಡರು.

'ಮಹಾನಾಯಕ' ಧಾರಾವಾಹಿಯನ್ನು ಕನ್ನಡದ ಜಾಯಮಾನಕ್ಕೆ ತಕ್ಕಂತೆ ರೀಮೇಕ್ ಮಾಡುವ ಉದ್ದೇಶ ವಾಹಿನಿಗೆ ಇತ್ತಂತೆ. ಆದರೆ ಕಿರುತೆರೆ ಆರ್ಥಿಕ ಸಂಕಷ್ಟದಲ್ಲಿರುವ ಸಂದರ್ಭದಲ್ಲಿ ದೊಡ್ಡ ಬಜೆಟ್ ಬಯಸುವ ರೀಮೇಕ್ ಯೋಜನೆಯನ್ನು ವಾಹಿನಿ ಕೈಬಿಟ್ಟಿದೆ.

'ಚಿಕ್ಕ ವಯಸ್ಸಿನಿಂದಲೂ ಸಮಾಜದಲ್ಲಿ ಹಾಸುಹೊಕ್ಕಾಗಿರುವ ಅಂತರವನ್ನು ಕಂಡಿದ್ದೇನೆ. ನನ್ನ ತಲೆಮಾರಿನಲ್ಲೇ ಸಹಿಸಲು ಅಸಾಧ್ಯ ಎನ್ನುವಷ್ಟು ಅಸಮಾನತೆಯ ಭೀಕರತೆಯನ್ನೂ ನೋಡಿದ್ದೇನೆ. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಓದುತ್ತಿದ್ದಾಗ ನಿಮ್ನ ವರ್ಗದ ನೋವು–ನಲಿವುಗಳನ್ನು ಹೆಚ್ಚು ಅರ್ಥ ಮಾಡಿಕೊಳ್ಳಲು ಸಾಧ್ಯವಾಯಿತು. ವರ್ತಮಾನದ ಸ್ಥಿತಿಯೇ ನಮ್ಮನ್ನು ಕಂಗೆಡಿಸುವಾಗ, ಸ್ವಾತಂತ್ರ್ಯಪೂರ್ವದ ಸಮಾಜವನ್ನು ಕಲ್ಪಿಸಿಕೊಳ್ಳುವುದೂ ಕಷ್ಟ. ಅಂದಿನ ಸಮಾಜದ ವಾಸ್ತವವನ್ನು ಒಂದು ಚೌಕಟ್ಟಿನಲ್ಲಿ ನೀಡುವುದರಲ್ಲಿ 'ಮಹಾನಾಯಕ' ಯಶಸ್ವಿಯಾಗಿದೆ' ಎನ್ನುತ್ತಾರೆ ಹುಣಸೂರು.

ಹಿಂದುಳಿದವರು ಎಂದು ನಾವು ಗುರ್ತಿಸುವ ಬಹುಸಂಖ್ಯಾತ ಸಮುದಾಯದ ಜನರ ಬದುಕನ್ನು ಕೇಂದ್ರೀಕರಿಸಿದ ಅಖಂಡ ಕಥೆಯೊಂದು ಈವರೆಗೆ ಧಾರಾವಾಹಿಯಾಗಿ ರೂಪುಗೊಳ್ಳದಿರುವುದು ಹುಣಸೂರು ಅವರಿಗೆ ಸೋಜಿಗವಾಗಿ ಕಂಡಿದೆ. ಆ ಕೊರತೆಯನ್ನು ತುಂಬುವ ನಿಟ್ಟಿನಲ್ಲ